## ಕರ್ನಾಟಕ ವಿಧಾನ ಪರಿಷತ್ತು

---

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1162+1165 |
| ಸದಸ್ಯರ ಹೆಸರು | : ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ) ಮತ್ತು<br>: ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 20.12.2018 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಮುಖ್ಯಮಂತ್ರಿಗಳು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 6ನೇ ವೇತನ ಆಯೋಗದ ಎಷ್ಟು ವರದಿಗಳು ಸರ್ಕಾರಕ್ಕೆ ಬಂದಿವೆ; (ವರದಿಗಳ ಪ್ರತಿ ನೀಡುವುದು) | ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಕುರಿತಂತೆ 6ನೇ ರಾಜ್ಯ ವೇತನ ಆಯೋಗವು ಸರ್ಕಾರಕ್ಕೆ ವರದಿಗಳನ್ನು 2 ಸಂಪುಟಗಳಲ್ಲಿ ಸಲ್ಲಿಸಿರುತ್ತದೆ. ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆ ಮತ್ತು ಪಿಂಚಣಿಗಳನ್ನು ದಿನಾಂಕ: 01-07-2017ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಆಯೋಗದ ವರದಿಗಳಲ್ಲಿನ ಉಳಿದ ಶಿಫಾರಸ್ಸುಗಳು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಇವುಗಳ ಅನುಷ್ಠಾನದ ಕುರಿತು ಅಂತಿಮ ಆದೇಶಗಳನ್ನು ಹೊರಡಿಸಿದ ನಂತರ, ಆಯೋಗದ ವರದಿಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಸೂಕ್ತ ಕ್ರಮವಹಿಸಲಾಗುವುದು. |
| ಆ | 6ನೇ ವೇತನ ಆಯೋಗದ ವರದಿಯ 2ನೇ ಸಂಪುಟ ಸರ್ಕಾರದ ಕೈ ಸೇರಿದೆಯೇ; ಇದರಲ್ಲಿರುವ ಶಿಫಾರಸ್ಸುಗಳೇನು; (ವಿವರವಾದ ಮಾಹಿತಿ ನೀಡುವುದು) | |
| ಇ | 6ನೇ ವೇತನ ಆಯೋಗದ ಮೊದಲನೇ ವರದಿ ಸಂಪೂರ್ಣವಾಗಿ ಜಾರಿಗೊಳಿಸಲಾಗಿದೆಯೇ; ಜಾರಿಗೊಳಿಸಿದ ಅಂಶಗಳಾವುವು; ಕೈಬಿಟ್ಟ ಅಂಶಗಳಾವುವು; ಮೊದಲನೇ ವರದಿ ಜಾರಿಗೊಳಿಸಿದ ನಂತರ ವೇತನ ತಾರತಮ್ಯವಾಗಿರುವ ಕುರಿತು ಎಷ್ಟು ವೃಂದದವರು ಮನವಿ ಸಲ್ಲಿಸಿದ್ದಾರೆ; ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |
| ಈ | 6ನೇ ವೇತನ ಆಯೋಗದ 2ನೇ ವರದಿ ಜಾರಿಯ ಕುರಿತು ಸರ್ಕಾರದ ನಿಲುವೇನು; ಆ ವರದಿಯ ಮುಖ್ಯಾಂಶಗಳೇನು; ಯಾವ ಕಾಲಮಿತಿಯೊಳಗೆ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗುವುದು? | |

**ಸಂಖ್ಯೆ: ಆಇ 34 ಎಸ್‌ಆರ್‌ಪಿ 2018**

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ